## ರಾಷ್ಟ್ರೀಯ ಹಸಿರು ಪಡೆ (ಎನ್‌ಜಿಸಿ)

ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ, ಭಾರತ ಸರ್ಕಾರ (MoEF & CC,GoI) ಮಂತ್ರಾಲಯವು 2001ರಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮದ ಉದ್ದೇಶವು ರಾಜ್ಯದಾದ್ಯಂತವಿರುವ ಶಾಲೆಗಳಲ್ಲಿ "ರಾಷ್ಟ್ರೀಯ ಹಸಿರು ಸೇನೆ" ಸ್ಥಾಪಿಸುವುದು, ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು, ರಕ್ಷಣೆ ಮತ್ತು ಸುಧಾರಣೆಗಾಗಿ ಕ್ರಮಾಧಾರಿತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. ಜನವರಿ 2009 ರಿಂದ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು (ಪನಿನೀಸಂಸಂ) ರಾಜ್ಯ ನೋಡಲ್ ಏಜೆನ್ಸಿಯಾಗಿ ಸೇವೆ ಸಲ್ಲಿಸುತ್ತಿದೆ.

2018–19ನೇ ಸಾಲಿನಲ್ಲಿ, MoEF & CC ಇವರಿಂದ 34 ಶೈಕ್ಷಣಿಕ ಜಿಲ್ಲೆಗಳನೊಳಗೊಂಡಂತೆ ರಾಜ್ಯದಾದ್ಯಂತ 7398 ಇಕೋ–ಕ್ಲಬ್ ಶಾಲೆಗಳಿಗೆ ಅನುದಾನ ಬಿಡುಗಡೆಯಾಗಿರುತ್ತದೆ.

2018–19ನೇ ಸಾಲಿನ ಕರ್ನಾಟಕ ರಾಜ್ಯದ ಇಕೋ–ಕ್ಲಬ್ ಶಾಲೆಗಳ ವಿವರಗಳು ಕೆಳಕಂಡಂತಿವೆ;–

| ಕ್ರ. ಸಂ | ಶಾಲೆಗಳ ವರ್ಗ | ಇಕೋ–ಕ್ಲಬ್‌ಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ / ಪ್ರೌಢಶಾಲೆ | 5994 |
| 2 | ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ / ಪ್ರೌಢಶಾಲೆ | 1404 |
| ಒಟ್ಟು | | 7398 |

### 2018–19ನೇ ಅವಧಿಯಲ್ಲಿ ರಾಷ್ಟ್ರೀಯ ಹಸಿರು ಪಡೆ (ಎನ್‌ಜಿಸಿ) ಕಾರ್ಯಕ್ರಮ

2018–19ನೇ ಆರ್ಥಿಕ ವರ್ಷದಲ್ಲಿ, ರಾಷ್ಟ್ರೀಯ ಹಸಿರು ಪಡೆ (ಎನ್‌ಜಿಸಿ) ಕಾರ್ಯಕ್ರಮದಡಿಯಲ್ಲಿ ಅರಣ್ಯ,ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯವು (MoEF & CC) ರೂ 3,65,19,022/– (ಮೂರು ಕೋಟಿ ಅರವತ್ತೈದು ಲಕ್ಷದ ಹತ್ತೊಂಬತ್ತು ಸಾವಿರ ಇಪ್ಪತ್ತೆರಡು) ಅನುದಾನವನ್ನು ಅನುಮೋದಿಸಿ (ಮಂಜೂರಾತಿ ಆದೇಶ ಸಂಖ್ಯೆ. 3/140/2001–ಇಇ (ಸಂಪುಟ 1) ದಿನಾಂಕ: 19.11.2018) ಎಂಪ್ರಿ ಸಂಸ್ಥೆಗೆ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಎಂಪ್ರಿ ಸಂಸ್ಥೆಯು ರಾಜ್ಯದಾದ್ಯಂತ 34 ಶೈಕ್ಷಣಿಕ ಜಿಲ್ಲೆಗಳ 7398 ಇಕೋ–ಕ್ಲಬ್ ಶಾಲೆಗಳಿಗೆ ರೂ 5000 ದಂತೆ ನೇರವಾಗಿ ಶಾಲೆಗಳ ಬ್ಯಾಂಕ್ ಖಾತೆಗಳಿಗೆ ಅನುದಾನವನ್ನು ವರ್ಗಾವಣೆ ಮಾಡಿರುತ್ತದೆ.

## 2018–19ನೇ ಸಾಲಿನ ಪರಿಸರ ದಿನಾಚರಣೆಗಳು

### ವಿಶ್ವ ಪರಿಸರ ದಿನ 2018

ಪನಿನೀಸಂಸಂಯು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರ ವಿವರಗಳು ಕೆಳಕಂಡಂತಿವೆ.

### ಎನ್ವಿಥಾನ್ (ಮಿನಿ–ಮ್ಯಾರಥಾನ್) ಮತ್ತು ಸೈಕ್ಲೋಥಾನ್

ವಿಶ್ವ ಪರಿಸರ ದಿನಾಚರಣೆ (2018) ಅಂಗವಾಗಿ "ಪ್ಲಾಸ್ಟಿಕ್ ಮಾಲಿನ್ಯ ಹಿಮ್ಮೆಟ್ಟಿಸಿ" ಎಂಬ ಘೋಷವಾಕ್ಯದೊಂದಿಗೆ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಎನ್ವಿಥಾನ್ (ಮಿನಿ–ಮ್ಯಾರಥಾನ್) 5 ಕಿಮೀ ಮತ್ತು ಸೈಕ್ಲೋಥಾನ್" 10 ಕಿಮೀ ಕಾರ್ಯಕ್ರಮವನ್ನು ದಿನಾಂಕ: 3ನೇ ಜೂನ್ 2018 ರಂದು ಬೆಂಗಳೂರಿನ ಕಬ್ಬನ್ ಪಾರ್ಕನಲ್ಲಿ ಆಯೋಜಿಸಲಾಗಿತ್ತು. ಶಾಲಾ ವಿದ್ಯಾರ್ಥಿಗಳು, ಕರ್ನಾಟಕ ಸರ್ಕಾರ ಹಾಗು ಕೇಂದ್ರ ಸರ್ಕಾರದ ಅಧಿಕಾರಿಗಳು ಹಾಗು ಸಿಬ್ಬಂದಿಗಳು, ಎನ್‌ಜಿಓಗಳು, ಭಾರತೀಯ ಸೇನೆ, ಸ್ವಯಂಸೇವಕರು ಮತ್ತು ಇತರೆ ಸಾರ್ವಜನಿಕರು ಒಳಗೊಂಡಂತೆ ಸುಮಾರು 3141 ಜನರು ಮಿನಿ–ಮ್ಯಾರಥಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



*ಎನ್ವಿಥಾನ್ ಕಾರ್ಯಕ್ರಮದ ಉದ್ಘಾಟನೆ*



ಮಿನಿಮ್ಯಾರಾಥಾನ್‌ನಲ್ಲಿ ಭಾಗವಹಿಸಿದವರು



"ಪ್ಲಾಸ್ಟಿಕ್ ಮಾಲಿನ್ಯ"" ಕುರಿತ ಬೀದಿ ನಾಟಕ

### ಪೆನ್ನಾರ್ ನದಿ ತೀರವನ್ನು ಸ್ವಚ್ಛಗೊಳಿಸುವ ಚಟುವಟಿಕೆ

ನಂದಿ ಬೆಟ್ಟದ ಪೆನ್ನಾರ್ ನದಿ ತೀರದ ಸ್ವಚ್ಛತಾ ಕಾರ್ಯಕ್ರಮವನ್ನು ದಿನಾಂಕ ಜೂನ್ 4, 2018 ರಂದು ಏರ್ಪಡಿಸಲಾಗಿತ್ತು. ಶಾಲಾ ಮಕ್ಕಳು, ಶಿಕ್ಷಕರು, ಪನಿನೀಸಂಸಂ ಸಿಬ್ಬಂದಿ, ಐಟಿಬಿಪಿ (ಇಂಡೋ–ಟಿಬೇಟಿಯನ್ ಗಡಿ ಪೋಲಿಸ್), ಕೇಂದ್ರ ಮೀಸಲು ಪೋಲಿಸ್ ಪಡೆ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಶಿಕ್ಷಣ ಇಲಾಖೆ, ಪ್ರವಾಸಿಗರು ಮತ್ತು ನಂದಿ ಬೆಟ್ಟದ ಪ್ರವಾಸಿಗರನ್ನು ಒಳಗೊಂಡಂತೆ ಸುಮಾರು 460 ಜನರು ನಂದಿ ಬೆಟ್ಟದ ಪೆನ್ನಾರ್ ನದಿ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪೆನ್ನಾರ್ ನದಿಯ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಸಂಗ್ರಹಿಸಿದ ಪ್ಲಾಸ್ಟಿಕ್ ನೀರಿನ ಬಾಟಲಿಗಳು, ಪ್ಲ್ಯಾಸ್ಟಿಕ್ ಹೊದಿಕೆಗಳು, ಪ್ಲಾಸ್ಟಿಕ್ ಚೀಲಗಳು,

ಪ್ಲಾಸ್ಟಿಕ್ ಫಲಕಗಳು, ಪ್ಲಾಸ್ಟಿಕ್ ಕಪ್‌ಗಳು ಮತ್ತು ಇತರೆ ತ್ಯಾಜ್ಯಗಳನ್ನು ಸಂಗ್ರಹಿಸಿ ಚಿಕ್ಕಬಳ್ಳಾಪುರ ನಗರಸಭೆಗೆ ಹಸ್ತಾಂತರಿಸಲಾಯಿತು.



*ಕೇಂದ್ರ ಮೀಸಲು ಪೋಲಿಸ್ ಪಡೆ ಸಿಬ್ಬಂದಿಯ ಜೊತೆಗೆ ಶಾಲಾ ಮಕ್ಕಳು, ಪೆನ್ನಾರ್ ನದಿ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿರುವುದು.*



*ಡಾ.ಕೆ.ಎಚ್.ವಿನಯ್ ಕುಮಾರ್, ನಿರ್ದೇಶಕರು (ಸಂ), ಎಂಪ್ರಿ ಭಾಗವಹಿಸಿದ್ದ ಶಾಲಾ ಮಕ್ಕಳೊಂದಿಗೆ ಒಂದು ಬಾರಿ ಪ್ಲಾಸ್ಟಿಕ್ ಬಳಕೆ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಪ್ರಸ್ತಾಪಿಸಿದರು*




*ಪೆನ್ನಾರ್ ನದಿ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಲಾ ಮಕ್ಕಳು, ನಂದಿಬೆಟ್ಟ*

**ಕಪಿಲ ನದಿ ತೀರವನ್ನು ಸ್ವಚ್ಛಗೊಳಿಸುವ ಚಟುವಟಿಕೆ**

ನಂಜನಗೂಡಿನ ಕಪಿಲ ನದಿ ತೀರದ ಸ್ವಚ್ಛತಾ ಕಾರ್ಯಕ್ರಮವನ್ನು ದಿನಾಂಕ ಜೂನ್ 12, 2018 ರಂದು ಏರ್ಪಡಿಸಲಾಗಿತ್ತು. ಶಾಲಾ ಮಕ್ಕಳು, ಶಿಕ್ಷಕರು, ಪನಿನೀಸಂಸಂ ಸಿಬ್ಬಂದಿ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ, (ಸಿಐಎ□□□ಫ್), ಅರಣ್ಯ ಇಲಾಖೆ, ನಂಜನಗೂಡು ಪುರಸಭೆ, ಪತ್ರಕರ್ತರು, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಬೆಂಗಳೂರಿನ ದಕ್ಷಿಣವಲಯ ಕಛೇರಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಮೈಸೂರು ಪ್ರಾದೇಶಿಕ ಕಛೇರಿ, ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಇಲಾಖೆಗಳ ಸಿಬ್ಬಂದಿಗಳನ್ನು ಒಳಗೊಂಡಂತೆ ಸುಮಾರು 505 ಜನರು ನಂಜನಗೂಡಿನ ಕಪಿಲಾ ನದಿ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಪಿಲಾ ನದಿಯ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಸಂಗ್ರಹಿಸಿದ ಪ್ಲಾಸ್ಟಿಕ್ ನೀರಿನ ಬಾಟಲಿಗಳು, ಪ್ಲಾಸ್ಟಿಕ್ ಹೊದಿಕೆಗಳು, ಪ್ಲಾಸ್ಟಿಕ್ ಚೀಲಗಳು, ಪ್ಲಾಸ್ಟಿಕ್ ಫಲಕಗಳು, ಪ್ಲಾಸ್ಟಿಕ್ ಕಪ್‌ಗಳು ಮತ್ತು ಇತರೆ ತ್ಯಾಜ್ಯಗಳನ್ನು ಸಂಗ್ರಹಿಸಿ ನಂಜನಗೂಡು ಸಿಎಂಸಿಗೆ ಹಸ್ತಾಂತರಿಸಲಾಯಿತು.



***ಕಪಿಲಾ ನದಿಯಲ್ಲಿ ದೋಣಿಯ ಮೂಲಕ ಪ್ಲಾಸ್ಟಿಕ್ ತ್ಯಜ್ಯವನ್ನು ಸಂಗ್ರಹಿಸುತ್ತಿರುವ ದೃಶ್ಯ.***




***ಕಪಿಲಾ ನದಿ ತೀರದ ಸ್ವಚ್ಛತಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಡಿಡಿ ಚಂದನ ಟಿವಿಗೆ ಸಂದರ್ಶನವನ್ನು ನೀಡುತ್ತಿರುವುದು.***

**ಕಡಲತೀರವನ್ನು ಸ್ವಚ್ಛಗೊಳಿಸುವ ಚಟುವಟಿಕೆ**

ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ, ಭಾರತ ಸರ್ಕಾರ (MoEF & CC, GoI) ಮಂತ್ರಾಲಯವು "ಪ್ಲಾಸ್ಟಿಕ್ ಮಾಲಿನ್ಯ ಹಿಮ್ಮೆಟ್ಟಿಸಿ" ಎಂಬ ಘೋಷವಾಕ್ಯದೊಂದಿಗೆ ಕಡಲತೀರ ಮತ್ತು ನದಿ ತೀರದ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಿತು. ಈ ನಿಟ್ಟಿನಲ್ಲಿ ಮೀನುಗಾರಿಕೆ ಕಾಲೇಜು, ಮಂಗಳೂರು ಇವರು ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಕಡಲತೀರವನ್ನು ಸ್ವಚ್ಛಗೊಳಿಸುವ ಚಟುವಟಿಕೆಗಳನ್ನು ಹಮ್ಮಿಕೊಂಡಿತ್ತು. ದಕ್ಷಿಣಕನ್ನಡ ಜಿಲ್ಲೆಯ 10 ಕಡಲತೀರಗಳಾದ_ಪಣಂಬೂರು,ತಣ್ಣೀರು ಬಾವಿ, ಬೆಂಗ್ರೆ, ಚೋಟಾ ಬೆಂಗ್ರೆ, ತಲಪಾಡಿ–ಸೋಮೇಶ್ವರ, ಸುರತ್ಕಲ್– ಹೊಸಬೆಟ್ಟು, ಕುಳಾಯಿ–ಚಿತ್ರಾಪುರ, ಉಳ್ಳಾಲ, ಸಸಿಹಿತ್ಲು–ಮುಕ್ಕ ಹಾಗು ಉಡುಪಿ ಜಿಲ್ಲೆಯ 5 ಕಡಲತೀರಗಳಾದ ಪಡುಬಿದ್ರಿ,ಕಾಪು,ಮಲ್ಪೆ, ಮರವಂತೆ ಮತ್ತು ಕೋಟೇಶ್ವರದಲ್ಲಿ ಹಮ್ಮಿಕೊಂಡಿತು. ಈ ಚಟುವಟಿಕೆಯು ಜೂನ್ 1 ರಿಂದ ಜೂನ್ 10, 2019 ರ ವರೆಗೆ ನೆಡೆದು "ಪ್ಲಾಸ್ಟಿಕ್ ಮಾಲಿನ್ಯದಿಂದ ಕಡಲ ಜೀವಿಗಳಿಗೆ ಹಾಗು ಪರಿಸರದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಹೆಚ್ಚಿನ ಅರಿವು ಮೂಡಿಸಿತು. ಈ ಕಾರ್ಯಕ್ರಮದಲ್ಲಿ ಸರ್ಕಾರದ ವಿವಿದ ಇಲಾಖೆಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರವಾಸೋದ್ಯಮ ಇಲಾಖೆ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿ, ಇಕೋ ಕ್ಲಬ್ಸ್, ಎನಜಿಒ, ಶಾಲಾಮಕ್ಕಳು, ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿದ್ದರು.

ಪ್ಲಾಸ್ಟಿಕ್ ಮಾಲಿನ್ಯದಿಂದ ಪರಿಸರದ ಮೇಲೆ ಹಾಗು ಜೀವಿಗಳ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಶಿಬಿರಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಈ ಸಂದರ್ಬದಲ್ಲಿ ತ್ಯಾಜ್ಯ ತಿರಸ್ಕರಿಸು, ಪುನರ್ಬಳಕೆ, ಪುನರ್ ಉಪಯೋಗದ ಬಗ್ಗೆ ತಿಳಿಸಲಾಯಿತು. ದಿನ ಬಳಕೆಯಲ್ಲಿ ಬಟ್ಟೆ ಚೀಲ, ಸ್ಟೀಲ್ ಲೋಟ ಹಾಗು ತಟ್ಟೆಗಳನ್ನು ಉಪಯೋಗಿಸುವಂತೆ ತಿಳಿಸಲಾಯಿತು. ನಿಷೇಧ ಪ್ಲಾಸ್ಟಿಕ್ ಉತ್ಪನ್ನಗಳು ಹಾಗು ಪರಿಸರ ಸ್ನೇಹಿ ಪರ್ಯಾಯ ಉತ್ಪನ್ನಗಳ ಕರ ಪತ್ರಗಳನ್ನು ಹಂಚಲಾಯಿತು.





## ವಿಶ್ವ ಓಝೋನ್ ದಿನ 2018

ಪನಿನೀಸಂಸಂ ಸಂಸ್ಥೆಯು 20 ಸೆಪ್ಟೆಂಬರ್ 2018 ರಂದು ವಿಶ್ವ ಓಝೋನ್ ದಿನಾಚರಣೆಯನ್ನು ಆಚರಿಸಿತು. ಇಕೋ ಕ್ಲಬ್ ಶಾಲೆಯ ವಿದ್ಯಾರ್ಥಿಗಳಿಗೆ ನಾಟಕ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ ಮತ್ತು ಘೋಷವಾಕ್ಯ ರಚನೆ ಸ್ಪರ್ಧೆಗಳನ್ನು ನಡೆಸಲಾಯಿತು. ಉದ್ಘಾಟನಾ ಸಮಾರಂಭವನ್ನು ಶ್ರೀಮತಿ ರಿತು ಕಕ್ಕರ್, ಭಾ.ಅ.ಸೇ. ಮಹಾ ನಿರ್ದೇಶಕರು, ಪನಿನೀಸಂಸಂ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಪ್ರೊ. ಜೆ.ಶ್ರೀನಿವಾಸನ್, ದಿವೇಚಾ ಹವಾಮಾನ ಬದಲಾವಣೆ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ರವರು ಓಝೋನ್ ದಿನದ ಪ್ರಾಮುಖ್ಯತೆಯನ್ನು ಶಾಲಾ ಮಕ್ಕಳಿಗೆ ತಿಳಿಸಿ ಹೇಳಿದರು. ಸ್ಪರ್ಧೆಯ ವಿಜೇತರಿಗೆ ಬಹುಮಾನಗಳ ವಿತರಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.




**ಉದ್ಘಾಟನಾ ಸಮಾರಂಭ**



***ನಾಟಕ ಸ್ಪರ್ಧೆಯಲ್ಲಿ ಶಾಲಾ ಮಕ್ಕಳು***

## "ಸ್ವಚ್ಛತಾ ಎ ಸೇವಾ" ಕಾರ್ಯಕ್ರಮ

ಮಹಾತ್ಮಾ ಗಾಂಧಿಯವರ 150ನೇ ಜನ್ಮ ವಾರ್ಷಿಕೋತ್ಸವ ಮತ್ತು ಸ್ವಚ್ಛ ಭಾರತ ಅಭಿಯಾನದ 4ನೇ ವಾರ್ಷಿಕೋತ್ಸವದ ಅಂಗವಾಗಿ ಸ್ವಚ್ಛತಾ ಎ ಸೇವಾ 2018 ನ್ನು ಗಮನಿಸಲು ನಿರ್ಧರಿಸಲಾಯಿತು. "ಸ್ವಚ್ಛತೆ ಒಂದು ಸೇವೆ" ಕಾರ್ಯಕ್ರಮವು "ನೈರ್ಮಲ್ಯ ಎಲ್ಲರ ವ್ಯವಹಾರದ" ಬಗ್ಗೆ ತಿಳಿಸುವುದಲ್ಲದೇ ಜನತೆಯ ಆಂದೋಲನದ ಬಗ್ಗೆ ಗುರಿಯನ್ನಾಗಿಸಿ ಭಾರತವನ್ನು ಸ್ವಚ್ಛಗೊಳಿಸುವ ದೃಷ್ಟಿಕೋನವಾಗಿದೆ. ಈ ನಿಟ್ಟಿನಲ್ಲಿ, ಅಕ್ಟೋಬರ್ 1, 2018ರಂದು ಪನಿನೀಸಂಸಂ ಸಂಸ್ಥೆಯ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀಮತಿ ರಿತು ಕಕ್ಕರ್, ಭಾ.ಅ.ಸೇ ಮಹಾನಿರ್ದೇಶಕರು, ಹಸಿರು ಪ್ರತಿಜ್ಞೆಯನ್ನು ಪನಿನೀಸಂಸಂ ಸಿಬ್ಬಂದಿಗಳಿಗೆ ಬೋಧಿಸಿದರು. ಸ್ವಚ್ಛತೆಯ ಕಾರ್ಯಕ್ರಮದಲ್ಲಿ ಸಂಗ್ರಹಿಸಿದ ತ್ಯಾಜ್ಯಗಳನ್ನು ಬಿಬಿಎಂಪಿಯವರಿಗೆ ವಿಲೇವಾರಿಗಾಗಿ ಒಪ್ಪಿಸಲಾಯಿತು.



*ಪನಿನೀಸಂಸಂಯ ಸಿಬ್ಬಂದಿಯಿಂದ ಹಸಿರು ಪ್ರತಿಜ್ಞೆ*



*ಪನಿನೀಸಂಸಂಯಲ್ಲಿ ಸ್ವಚ್ಛತೆಯ ಕಾರ್ಯಕ್ರಮ*

**ವಿಶ್ವ ಜೌಗುಭೂಮಿ ದಿನಾಚರಣೆ**

ವಿಶ್ವ ಜೌಗುಭೂಮಿ ದಿನಾಚರಣೆಯನ್ನು ದಿನಾಂಕ:02.02.2019 ರಂದು ಆಚರಿಸಲಾಯಿತು. ಜಾಗತಿಕ ಮಟ್ಟದಲ್ಲಿ ತೇವಾಂಶವನ್ನು ಸಂರಕ್ಷಿಸಲು 1971 ರಲ್ಲಿ ನೆಡೆದ ರಾಮ್‌ಸರ್ ಜೌಗುಭೂಮಿ ಸಮಾವೇಶದ ನೆನಪಿಗಾಗಿ ಕೊಳ್ಳಲು ವಿಶ್ವ ಜೌಗುಭೂಮಿ ದಿನಾಚರಣೆಯನ್ನು ಆಚರಿಸಲಾಯತು. ಜೌಗುಭೂಮಿ ದಿನಾಚರಣೆಯ ಅಂಗವಾಗಿ ಪುಟ್ಟೇನಹಳ್ಳಿ ಶಾಲಾ ಮಕ್ಕಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ತೇವಾಂಶದ ಬಗ್ಗೆ ಜಾಗೃತಿ ಮೂಡಿಸಲು ಹತ್ತಿರದ ಪುಟ್ಟೇನಹಳ್ಳಿ ಕೆರೆಗೆ ಶಾಲಾ ಮಕ್ಕಳನ್ನು ಕರೆದೊಯ್ಯಲಾಯಿತು. ತೇವಭೂಮಿ ಬಗ್ಗೆ ಪ್ರಾಮುಖ್ಯತೆಯನ್ನು ತಿಳಿಯಲು ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಪರಿಸರವಾದಿ, ಶ್ರೀ ಪ್ರಸಾದ್ ಅವರು ಪಕ್ಷಿಗಳ ಗುರುತಿಸುವಿಕೆಯ ಪ್ರಾತ್ಯಕ್ಷಿಕೆಯನ್ನು ನಡೆಸಿದರು. ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಲಾಯಿತು. ವಿಜೇತರಿಗೆ ಪುಸ್ತಕಗಳನ್ನು ಹಾಗೂ ಪ್ರಮಾಣಪತ್ರಗಳನ್ನು ಬಹುಮಾನವನ್ನಾಗಿ ನೀಡುವ ಮೂಲಕ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಲಾಯಿತು.




*ಪುಟ್ಟೇನಹಳ್ಳಿ ಕೆರೆಯ ಕಡೆಗೆ ಪರಿಸರ ಜಾಥಾ*



*ಪಕ್ಷಿಗಳ ವೀಕ್ಷಣೆ – ವಿದ್ಯಾರ್ಥಿಗಳಿಂದ*



**ಶಾಲಾ ಮಕ್ಕಳಿಗಾಗಿ ರಸಪ್ರಶ್ನೆ ಸ್ಪರ್ಧೆ**

## ಗಿಡ ನೆಡುವ ಕಾರ್ಯಕ್ರಮ

ಗೌರವಾನ್ವಿತ ಸಚಿವರಾದ ಶ್ರೀ. ಆರ್. ಶಂಕರ್, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ ಇವರು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಹವಾಮಾನ ಬದಲಾವಣೆ ಪ್ರಯೋಗಾಲಯವನ್ನು ದಿನಾಂಕ 24–07–2018 ರಂದು ಉದ್ಘಾಟಿಸಿದರು. ಅವರ ಭೇಟಿಯ ಸಂದರ್ಭದಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಈ ಕೆಳಕಂಡ ಇಕೋ–ಕ್ಲಬ್ ಶಾಲೆಗಳಿಗೆ ಸಸಿಗಳನ್ನು ವಿತರಿಸಲಾಯಿತು:

1. ಬೆಂಗಳೂರು ದಕ್ಷಿಣ ವಲಯ – 14 ಇಕೋ–ಕ್ಲಬ್ ಶಾಲೆಗಳು, ಪ್ರತಿ ಇಕೋ–ಕ್ಲಬ್ ಶಾಲೆಗಳಿಗೆ 10 ಸಸಿಗಳಂತೆ ಒಟ್ಟು 140 ಸಸಿಗಳನ್ನು ವಿತರಿಸಲಾಯಿತು.
2. ಬೆಂಗಳೂರು ಉತ್ತರ ವಲಯ – 10 ಇಕೋ–ಕ್ಲಬ್ ಶಾಲೆಗಳು, ಪ್ರತಿ ಇಕೋ–ಕ್ಲಬ್ ಶಾಲೆಗಳಿಗೆ 10 ಸಸಿಗಳಂತೆ ಒಟ್ಟು 100 ಸಸಿಗಳನ್ನು ವಿತರಿಸಲಾಯಿತು.



**ಪನಿನೀಸಂಸಂಯಲ್ಲಿ ಶ್ರೀ. ಆರ್. ಶಂಕರ್, ಸಚಿವರು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ *ಗಿಡ ನೆಡುವ ಕಾರ್ಯಕ್ರಮ***



***ಇಕೋ–ಕ್ಲಬ್ ಶಾಲೆಗಳಲ್ಲಿ ಪನಿನೀಸಂಸಂ ಸಂಸ್ಥೆಯ ಗಿಡ ನೆಡುವ ಕಾರ್ಯಕ್ರಮ***

## ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ಮುಕ್ತ ಶಿಬಿರ

ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಪನಿನೀಸಂಸಂಯು ಸರ್ಕಾರೇತರ ಸಂಸ್ಥೆಯ ಸಹಯೋಗದೊಂದಿಗೆ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಈ ಶಿಬಿರದ ಸಮಯದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನವನದ ಒಳಾಂಗಣ ಮತ್ತು ಹೊರಾಂಗಣದಲ್ಲಿ ಸಂಗ್ರಹಿಸಿ ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲಾಯಿತು. ಪನಿನೀಸಂಸಂಯು ಘನ ತ್ಯಾಜ್ಯ ನಿರ್ವಹಣೆ, ಕಸವನ್ನು ತಡೆಗಟ್ಟುವುದು ಮತ್ತು ಉದ್ಯಾನವನದ ಶುಚಿತ್ವ ಹಾಗೂ ಸುತ್ತಮುತ್ತಲಿನ ಪ್ರದೇಶದ ಜೀವವೈವಿಧ್ಯದ ಬಗ್ಗೆಯೂ ಕೂಡ ಅರಿವನ್ನು ಮೂಡಿಸಿದೆ.

ನೂರಕ್ಕೂ ಹೆಚ್ಚು ಮಂದಿ ಸಿಆರ್‌ಪಿಎಫ್ ಬೆಂಗಳೂರು, ಸ್ವಯಂಸೇವಕರು , ಶಾಲೆ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಒಳಗೊಂಡಂತೆ ಪ್ಲಾಸ್ಟಿಕ್ ಮುಕ್ತ ಶಿಬಿರದಲ್ಲಿ ಪಾಲ್ಗೊಂಡಿದ್ದರು. ನಿಷೇದಿತ ಪ್ಲಾಸ್ಟಿಕ್ಗಳು ಮತ್ತು ಪ್ಲಾಸ್ಟಿಕ್ ಪರ್ಯಾಯಗಳನ್ನು ಕುರಿತ ಕರಪತ್ರಗಳು ಹಾಗೂ ಪ್ಲಾಸ್ಟಿಕ್ ಮುಕ್ತ ಕರ್ನಾಟಕ ಕೈಪಿಡಿಗಳು ಈ ಸಂಧರ್ಭದಲ್ಲಿ ವಿತರಿಸಲ್ಪಟ್ಟವು.





**ತ್ಯಾಜ್ಯ ನಿರ್ವಹಣೆ**

ಪನಿನೀಸಂಸಂ ಸಂಸ್ಥೆಯು ವಿವಿಧ ಇಲಾಖೆಗಳಿಗೆ ಹಾಗೂ ಗುಂಪುಗಳಿಗೆ ತ್ಯಾಜ್ಯ ನಿರ್ವಹಣೆಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿತು. ರಾಜ್ಯದಲ್ಲಿರುವ ಇಕೋ–ಕ್ಲಬ್ ಶಾಲೆಗಳು ತ್ಯಾಜ್ಯ ನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದಲ್ಲದೇ ಹಸಿಕಸ ಹಾಗೂ ಒಣಕಸವನ್ನು ಬೇರ್ಪಡಿಸಿ ಬೇರೆ ಬೇರೆ ಬಿನ್‌ಗಳಿಗೆ ಕಸವನ್ನು ಹಾಕುತ್ತಿದ್ದಾರೆ.



*ಹೆರ್ಗಾ ವಿಟ್ಟಲ ಶೆಟ್ಟಿ ಸರ್ಕಾರಿ ಪ್ರೌಢ ಶಾಲೆ,*
*ಕುಚೂರು ಉಡುಪಿ ಜಿಲ್ಲೆ*



*ಮುಕ್ತಿ ಪ್ರಕಾಶ ಪ್ರೌಢ ಶಾಲೆ, ನೀರುಡೆ,*
*ದಕ್ಷಿಣ ಕನ್ನಡ ಜಿಲ್ಲೆ*

**ಪ್ಲಾಸ್ಟಿಕ್ ನಿಷೇಧ ಕುರಿತು ಸಾರ್ವಜನಿಕ ಜಾಗೃತಿ.**


ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ– 2016 ರ ಕುರಿತು ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಮೂಲಕ ಅರಿವು ಮೂಡಿಸುವ ಸಲುವಾಗಿ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳು ಬಳಸಬಹುದಾದ ಪರಿಸರ ಸ್ನೇಹಿ ಪರ್ಯಾಯ ಉತ್ಪನ್ನಗಳ ಕುರಿತ ಭಿತ್ತಿ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಅಲ್ಲದೆ ಇತರೆ ಪರಿಸರಾತ್ಮಕ ವಿಷಯಗಳ ಕುರಿತು ಭಿತ್ತಿ ಚಿತ್ರ ಪ್ರದರ್ಶನ ಹಾಗು ಕರಪತ್ರಗಳ ಹಂಚಿಕೆಯನ್ನು ಕೈಗೊಳ್ಳಲಾಯಿತು.



*ಸರ್ಕಾರಿ ಪ್ರೌಢ ಶಾ*



*ಳಿಕೊಪ್ಪ,*
*ಲ್ಲೆ*



**ವಾಯು ಮಾಲಿನ್ಯ ತಗ್ಗಿಸುವಿಕೆ ಮತ್ತು ಹಸಿರು ದೀಪಾವಳಿ ಆಚರಣೆ**

ಪನಿನೀಸಂಸಂಯು ಸಸಿಗಳು, ಮಣ್ಣಿನ ಹಣತೆಗಳು, ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿ ಕುರಿತ ಕರಪತ್ರಗಳನ್ನು ಇಕೋ–ಕ್ಲಬ್ ಶಾಲೆಗಳಿಗೆ ವಿತರಿಸಿತು. ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿಯ ಪ್ರತಿಜ್ಞೆಯನ್ನು ಶಾಲೆಗಳು/ಕಾಲೇಜುಗಳು ಮತ್ತು ಇತರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ಶಾಲಾ ಸಭೆಯಲ್ಲಿ ಈ ಯೋಜನೆಯನ್ನು ನಿರ್ವಹಿಸಲು ಆಡಳಿತ ಮಂಡಳಿಯವರಲ್ಲಿ ವಿನಂತಿಸಲಾಯಿತು. ಎಂಪ್ರಿ ಸಂಸ್ಥೆಯು 31 ಇಕೋ–ಕ್ಲಬ್ ಶಾಲೆಗಳನ್ನು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿ ಅರಿವಿನ ಪ್ರತಿಜ್ಞೆಯನ್ನು ಕನ್ನಡದಲ್ಲಿ ತೆಗೆದುಕೊಳ್ಳುವಂತೆ ವಿನಂತಿಸಲಾಯಿತು. ಪ್ಲಾಸ್ಟಿಕ್ ನಿಷೇಧದ ಅರಿವನ್ನು ಮೂಡಿಸಲು/ಹರಡಲು ಪನಿನೀಸಂಸಂಯು ಇಕೋ–ಕ್ಲಬ್ ಶಾಲೆಗಳಿಗೆ ಬಟ್ಟೆ ಚೀಲಗಳನ್ನು ವಿತರಿಸಿತು. ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ಸ್ವಚ್ಛಗೊಳಿಸುವ ಕಾರ್ಯಕ್ರಮವನ್ನು ಕೈಗೊಂಡರು.

ಇಕೋ–ಕ್ಲಬ್ ಶಾಲೆಗಳು ಮಣ್ಣಿನ ಹಣತೆಗಳು, ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿಯ ಆಚರಣೆಯ ಪ್ರತಿಜ್ಞೆ, ಗಿಡ ನೆಡುವ ಕಾರ್ಯಕ್ರಮ, ಜಾಥಾ, ಸಾಂಸ್ಕೃತಿಕ ಕಾರ್ಯಕ್ರಮಗಳು, ಶಾಲೆಗಳಲ್ಲಿ ಹಣತೆಯನ್ನು ಬೆಳಗುವಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿಯ ಅರಿವನ್ನು ಮೂಡಿಸುವ ಕರಪತ್ರಗಳನ್ನು ಇಕೋ–ಕ್ಲಬ್ ಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.




***ಇಕೋ–ಕ್ಲಬ್ ಶಾಲೆಗಳಿಗೆ ಸಸ್ಯಗಳ ವಿತರಣೆ***



***ಇಕೋ–ಕ್ಲಬ್ ಶಾಲೆಗಳಿಗೆ ಮಣ್ಣಿನ ಹಣತೆಗಳ ವಿತರಣೆ***



***ಇಕೋ–ಕ್ಲಬ್ ಶಾಲೆಗಳ ವಿದ್ಯಾರ್ಥಿಗಳಿಂದ ಜಾಗೃತಿಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು.***




*ಇಕೋ–ಕ್ಲಬ್ ಶಾಲೆಗಳಿಗೆ ಕರಪತ್ರಗಳ ವಿತರಣೆ*

**ಬಯಲು ಮುಕ್ತ ಶೌಚಾಲಯದ ಬಗ್ಗೆ ಜಾಗೃತಿ**

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪನಿನೀಸಂಸಂಯ ಮಳಿಗೆಯಲ್ಲಿ ಬಯಲು ಮುಕ್ತ ಶೌಚಾಲಯದ ಮಾಹಿತಿಯನ್ನು ಒಳಗೊಂಡ ಕರಪತ್ರಗಳನ್ನು ಹಂಚಲಾಯಿತು. ಮಳಿಗೆಯು ದಿನಾಂಕ 10 ಅಕ್ಟೋಬರ್ 2018 ರಿಂದ 15 ಜನವರಿಯವರೆಗೆ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗಿತ್ತು. ಇಕೋ–ಕ್ಲಬ್ ಶಾಲೆಗಳು ಕೂಡ ಬಯಲು ಮುಕ್ತ ಶೌಚಾಲಯದ ಕುರಿತು ಪ್ರಚಾರ ನೀಡಲು ವಿವಿಧ ಚಟುವಟಿಕೆಗಳನ್ನು ಆಯೋಜಿಸಿವೆ.




*ಬಯಲು ಮುಕ್ತ ಶೌಚಾಲಯದ ಬಗ್ಗೆ ಜಾಗೃತಿಯನ್ನು ಮೂಡಿಸಲು ಇಕೋ–ಕ್ಲಬ್ ಶಾಲೆಗಳ ವಿದ್ಯಾರ್ಥಿಗಳು ಜಾಥಾವನ್ನು ಕೈಗೊಂಡರು*






## ನೈರ್ಮಲ್ಯತೆ

ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ– 2016 ರ ಕುರಿತು ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಮೂಲಕ ಅರಿವು ಮೂಡಿಸುವ ಸಲುವಾಗಿ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳು ಬಳಸಬಹುದಾದ ಪರಿಸರ ಸ್ನೇಹಿ ಪರ್ಯಾಯ ಉತ್ಪನ್ನಗಳ ಕುರಿತ ಭಿತ್ತಿ ಚಿತ್ರಗಳನ್ನು ಪ್ರದರ್ಶಿಸಲಾಯಿತು ಹಾಗೆಯೇ ನೈರ್ಮಲ್ಯತೆ ಬಗ್ಗೆ ಅರಿವನ್ನು ಮೂಡಿಸುವ ಸಲುವಾಗಿ ನೈರ್ಮಲ್ಯತೆ ಮಾಹಿತಿಯನ್ನು ಒಳಗೊಂಡ ಕರಪತ್ರಗಳನ್ನು ಹಂಚಲಾಯಿತು. ಮಳಿಗೆಯುನ್ನು ದಿನಾಂಕ 10 ಅಕ್ಟೋಬರ್ 2018 ರಿಂದ 15 ಜನವರಿಯವರೆಗೆ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗಿತ್ತು. ಇಕೋ–ಕ್ಲಬ್ ಶಾಲೆಗಳು ಕೂಡ ನೈರ್ಮಲ್ಯತೆ ಕುರಿತು ಪ್ರಚಾರ ನೀಡಲು ವಿವಿಧ ಚಟುವಟಿಕೆಗಳನು ಆಯೋಜಿಸಿವೆ.





ದಿನ ... ಮ್ಮೆಟಿಸಿ” ಎಂಬುದನ್ನು ಕೇಂದ್ರವನ್ನಾಗಿಟ್ಟುಕೊಂಡು ವಿವಿಧ ಚಟುವಟಿಕೆಗಳನ್ನು ಕೈಗೊಂಡಿವೆ. ಸ್ವಚ್ಛಗೊಳಿಸುವ

*ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಶಿವನೂರು, ಚಿಕ್ಕೋಡಿ ಜಿಲ್ಲೆ*

ಚಟುವಟಿಕೆಗಳು, ಪ್ಲಾಸ್ಟಿಕ್ ಮುಕ್ತ ಶಾಲೆಗಳು, ಜಾಥಾ, ಬೀದಿ ನಾಟಕಗಳನ್ನು ಪರಿಸರದ ಮೇಲೆ ಪ್ಲಾಸ್ಟಿಕ್‌ನಿಂದ ಉಂಟಾಗುವ ಹಾನಿಕಾರಿಕ ಪರಿಣಾಮಗಳ ಅರಿವನ್ನು ಮೂಡಿಸುವ ಸಲುವಾಗಿ ಕೈಗೊಳ್ಳಲಾಯಿತು.

ಪನಿನೀಸಂಸಂಯು ಪ್ಲಾಸ್ಟಿಕ್ ಮುಕ್ತ ಶಿಬಿರವನ್ನು ಆಯೋಜಿಸುವ ಸಲುವಾಗಿ ವಿವಿಧ ಚಟುವಟಿಕೆಗಳನ್ನು ಏರ್ಪಡಿಸಿತು ಅವಾವುವೆಂದರೆ ಸ್ವಚ್ಛಗೊಳಿಸುವ ಶಿಬಿರ, ಜಾಥಗಳು, ತರಬೇತಿಗಳು, ಮಿನಿಮ್ಯಾರಾಥಾನ್, ನದಿ/ಕಡಲ ತೀರಗಳನ್ನು ಶುಚಿಗೊಳಿಸುವ ಚಟುವಟಿಕೆಗಳು. ಪನಿನೀಸಂಸಂಯು ಪ್ಲಾಸ್ಟಿಕ್ ನಿಷೇಧಿತ ಕರಪತ್ರಗಳು, ಪ್ಲಾಸ್ಟಿಕ್ ಮುಕ್ತ ಕರ್ನಾಟಕ ಕರಪತ್ರಗಳನ್ನು ಹಾಗೂ ಬಟ್ಟೆ ಚೀಲಗಳನ್ನು ವಿವಿಧ ಇಲಾಖೆಗಳಿಗೆ, ಗುಂಪುಗಳಿಗೆ ಮತ್ತು ಇಕೋ-ಕ್ಲಬ್ ಶಾಲೆಗಳಿಗೆ ವಿತರಿಸಿದೆ.



*ಸರ್ಕಾರಿ ಪ್ರೌಢ ಶಾಲೆ ಶುಂಠಿಕೊಪ್ಪ ಕೊಡಗು ಜಿಲ್ಲೆ*




*ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಉಡುಪಿ ಜಿಲ್ಲೆ*

## ಸ್ವಚ್ಛತಾ ಕ್ರಿಯಾ ಯೋಜನೆ

### ಕಸ ಮುಕ್ತ ನಿಸರ್ಗ ಕಾರ್ಯಕ್ರಮ, ನೈರ್ಮಲ್ಯ ಆಂದೋಲನ ಜಾಗೃತಿ ಕಾರ್ಯಕ್ರಮ, ಶುದ್ಧ ವಾಯು ಜಾಗೃತಿ ಕಾರ್ಯಕ್ರಮ

ಪನಿನೀಸಂಸಂಯು ಕಸ ಮುಕ್ತ ನಿಸರ್ಗ ಕಾರ್ಯಕ್ರಮ, ನೈರ್ಮಲ್ಯ ಆಂದೋಲನ ಜಾಗೃತಿ ಕಾರ್ಯಕ್ರಮ, ಶುದ್ಧ ವಾಯು ಜಾಗೃತಿ ಕಾರ್ಯಕ್ರಮವನ್ನು ದಿನಾಂಕ: 15.02.2019 ರಂದು ದೊರೆಸಾನಿಪಾಳ್ಯ ಅರಣ್ಯ ಆವರಣ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿತು. ಈ ಕಾರ್ಯಕ್ರಮವು ಅರಣ್ಯ,ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಪ್ರಾದೇಶಿಕ ಕಛೇರಿ ಬೆಂಗಳೂರು ಸಿಬ್ಬಂದಿ, ಬೃಹತ್ ಬೆಂಗಳೂರು ನಗರ ಪಾಲಿಕೆ ನೌಕರರು ಮತ್ತು ಪನಿನೀಸಂಸಂ ಸಿಬ್ಬಂದಿ ಪಾಲ್ಗೊಳ್ಳುವಿಕೆಯಿಂದ ಯಶಸ್ವಿಯಾಯಿತು. ಟೀ-ಶರ್ಟ್ಸ್ ಮತ್ತು ಟೋಪಿಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ವಿತರಿಸಲಾಯಿತು. ದೊರೆಸಾನಿಪಾಳ್ಯ ಅರಣ್ಯ ಆವರಣದಲ್ಲಿ ಜಾಥಾವನ್ನು ಕೈಗೊಳ್ಳಲಾಯಿತು. ದೊರೆಸಾನಿಪಾಳ್ಯ ಅರಣ್ಯ ಪ್ರದೇಶವನ್ನು ಸ್ವಚ್ಛಗೊಳಿಸುವ ಕಾರ್ಯವು ಸ್ವಚ್ಛಗೊಳಿಸುವ ಚಾಲನೆ ಕಾರ್ಯಕ್ರಮದ ಭಾಗವಾಗಿತ್ತು. ಮಾಧ್ಯಮದವರು ಸಹ ಶಿಬಿರವನ್ನು ಬೆಂಬಲಿಸಿದರು.



- **ಗಿಡಗಳನ್ನು ನೆಡುವ ಕಾರ್ಯಕ್ರಮ**

ಪನಿನೀಸಂಸಂಯು ದೊರೆಸಾನಿಪಾಳ್ಯ ಆವರಣದಲ್ಲಿ ಹಾಗೂ ಇಕೋ–ಕ್ಲಬ್ ಶಾಲೆಗಳಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮದ ಮುಖಾಂತರ ಗಿಡನೆಡುವಿಕೆಯ ಪ್ರಚಾರವನ್ನು ಮಾಡಿದೆ.

- **ಪರಿಸರ ಚಲನಚಿತ್ರೋತ್ಸವ**

ಸ್ವಚ್ಛತಾ ಕ್ರಿಯಾ ಯೋಜನೆ ಕಾರ್ಯಕ್ರಮದಡಿಯಲ್ಲಿ ಎಂಪ್ರಿ ಸಂಸ್ಥೆಯು ಪರಿಸರ ಚಲನಚಿತ್ರೋತ್ಸವವನ್ನು ದಿನಾಂಕ: 28/02/2018 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯ ಸಭಾಂಗಣದಲ್ಲಿ ಆಯೋಜಿಸಿತ್ತು. ಶ್ರೀ ವಿಜಯ್ ಕುಮಾರ್ ಗೋಗಿ, ಭಾ.ಅ.ಸೇ, ಪ್ರಧಾನ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ) ಕರ್ನಾಟಕ ಸರ್ಕಾರ,  ಶೀ ಮನೋಜ್ ಕುಮಾರ್, ಭಾ.ಅ.ಸೇ, ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಇವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ಇವರ ಜೊತೆ ಪನಿನೀಸಂಸಂಯ ಮಹಾನಿರ್ದೇಶಕರಾದ ಶ್ರೀಮತಿ ರಿತು ಕಕ್ಕರ್, ಭಾ.ಅ.ಸೇ, ಪನಿನೀಸಂಸಂಯ ನಿರ್ದೇಶಕರಾದ ಶ್ರೀ ಮಹೇಶ್ ಬಿ ಶಿರೂರ್, ಭಾ.ಅ.ಸೇ , ಡಾ.ಕೆ.ಎಚ್.ವಿನಯ್ ಕುಮಾರ್, ಭಾ.ಅ.ಸೇ ನಿರ್ದೇಶಕರು (ಸಂಶೋಧನೆ) ಪನಿನೀಸಂಸಂ, ಪನಿನೀಸಂಸಂಯ ಸಿಬ್ಬಂದಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪರಿಸರ ಸಂಬಂದಿತ ವಿಷಯಗಳ ಕುರಿತು ಹಲವಾರು ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಮತ್ತು ಚಲನಚಿತ್ರಗಳ ವಿಷಯದ ಬಗ್ಗೆ ಚರ್ಚೆಗಳನ್ನು ನಡೆಸಲಾಯಿತು. ನೀರಿನ ಕೊರತೆ, ಜಾಗತಿಕ ಸಮಸ್ಯೆಗಳು, ಜಲಮಾಲಿನ್ಯ ಹಾಗೂ ನೀರಿನ ಸಂರಕ್ಷಣೆಯನ್ನೊಳಗೊಂಡ ಚಲನಚಿತ್ರಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು.




- **ಬಯಲು ಮುಕ್ತ ಶೌಚಾಲಯದ ಬಗ್ಗೆ ಅರಿವು**

ಪನಿನೀಸಂಸಂ ಸಂಸ್ಥೆ ಹಾಗೂ ಇಕೊಕ್ಲಬ್‌ಗಳು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಬಯಲು ಮುಕ್ತ ಶೌಚಾಲಯದ ಬಗ್ಗೆ ಅರಿವನ್ನುಂಟು ಮಾಡಲು ವಿವಿಧ ಚಟುವಟಿಕೆಗಳನ್ನು ಆಯೋಜಿಸಿದ್ದವು.

- **ನದಿ ತೀರ ಮತ್ತು ಕಡಲು ತೀರಗಳ *ಸ್ವಚ್ಛತಾ ಕಾರ್ಯಕ್ರಮ***

ಪೆನ್ನಾರ್ ಹಾಗೂ ಕಪಿಲ ನದಿ ಹಾಗೂ ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆಗಳ ಕಡಲ ತೀರಗಳನ್ನು ಸ್ವಚ್ಛಗೊಳಿಸುವ ಚಟುವಟಿಕೆಗಳನ್ನು ದಿನಾಂಕ 1/06/2019 ರಿಂದ 10/06/2019 ವರೆಗೆ ಹಮ್ಮಿ ಕೊಳ್ಳಲಾಯಿತು.

- **ಇಕೋ–ಕ್ಲಬ್ ಶಾಲೆಗಳ ಉಸ್ತುವಾರಿ ಶಿಕ್ಷಕರಿಗೆ ಜೀವವೈವಿಧ್ಯದ ಕುರಿತಾದ ಕಾರ್ಯಕ್ರಮ**

ಪನಿನೀಸಂಸಂ ಸಂಸ್ಥೆಯು ಜೀವವೈವಿಧ್ಯತೆಯ ಅರಿವು ಮೂಡಿಸುವ ಸಲುವಾಗಿ ಇಕೋ–ಕ್ಲಬ್ ಶಿಕ್ಷಕರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಬೆಂಗಳೂರು ಉತ್ತರ ಮತ್ತು ದಕ್ಷಿಣ ವಲಯದ 166 ಇಕೋ–ಕ್ಲಬ್ ಶಾಲೆಗಳ ಉಸ್ತುವಾರಿ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಚಿಟ್ಟೆಗಳನ್ನು ಹವಾಮಾನ ಬದಲಾವಣೆ ಸೂಚಕಗಳನ್ನಾಗಿ ಗುರುತಿಸಲಾಗಿದೆ ಏಕೆಂದರೆ ಅವಾಸಸ್ಥಾನ ಹಾಗು ಹವಾಮಾನ ಬದಲಾವಣೆಯನ್ನು ಅತ್ಯಂತ ವೇಗದಲ್ಲಿ ಮತ್ತು ಸೂಕ್ಷ್ಮತೆಯಲ್ಲಿ ಚಿಟ್ಟೆಗಳು ಪ್ರತಿಸ್ಪಂದಿಸುತ್ತವೆ ಮತ್ತು ವೈವಿಧ್ಯತೆಯ ಪ್ರತಿನಿಧಿಯಾಗಿಯೂ ಹಾಗೂ ಬೇರೆ ವನ್ಯಜೀವಿಗಳಿಗೂ ಸ್ಪಂದಿಸುತ್ತವೆ. ಈ ನಿಟ್ಟಿನಲ್ಲಿ ಚಿಟ್ಟೆಗಳನ್ನು ಗುರುತಿಸುವ ಹಾಗು ಚಿಟ್ಟೆಗಳ ವೈವಿಧ್ಯತೆಯ ಬಗ್ಗೆ ಕಾರ್ಯಗಾರವನ್ನು ಸಹ ನಡೆಸಲಾಯಿತು. ಪನಿನೀಸಂಸಂಯ ಚಿಟ್ಟೆಗಳ


ಮೊಬೈಲ್ ಆಪ್ಲಿಕೇಷನ್‌ನ ಮಾಹಿತಿಯನ್ನು ಕೊಡಲಾಯಿತು. ಚಿಟ್ಟೆಗಳನ್ನು ಗುರುತಿಸಲು ಕ್ಷೇತ್ರ ಭೇಟಿಗಾಗಿ ಶಿಕ್ಷಕರನ್ನು ಕರೆದೊಯ್ಯಲಾಯಿತು. ಇಕೋ–ಕ್ಲಬ್ ಚಟುವಟಿಕೆಗಳ ಕುರಿತು ಮಾಹಿತಿಯನ್ನು ಕೂಡ ನೀಡಲಾಯಿತು.






- **ಪನಿನೀಸಂಸಂ ಪ್ರಕಟಿಸಿದ ಮಕ್ಕಳ ಪುಸ್ತಕಗಳು**

ಪನಿನೀಸಂಸಂಯು ಕೆರೆಗಳ ಸಂರಕ್ಷಣೆ ಬಗ್ಗೆ "ಕೆರೆ ವೈದ್ಯರು" ಮತ್ತು ಶುದ್ಧ ವಾಯು ಸಂರಕ್ಷಣೆ ಕುರಿತಾದ ಚಟುವಟಿಕೆ ಪುಸ್ತಕಗಳನ್ನು ಹೊರತಂದಿದೆ. ಈ ಪುಸ್ತಕಗಳನ್ನು ರಾಜ್ಯದ ಎಲ್ಲಾ ಇಕೋ–ಕ್ಲಬ್ ಶಾಲೆಗಳಿಗೆ ಕಳುಹಿಸಿಕೊಡಲಾಗಿದೆ. ಕೆರೆಗಳು ಹಾಗು ಶುದ್ಧ ವಾಯುವಿನ ಬಗ್ಗೆ ಸುಲಬವಾಗಿ ಮಕ್ಕಳಿಗೆ ಅರ್ಥವಾಗುವಂತೆ ತಿಳಿಸಿಕೊಡಲಾಗಿದೆ.




"ಕೆರೆ ವೈದ್ಯರು" ಮತ್ತು ಶುದ್ಧ ವಾಯು ಸಂರಕ್ಷಣೆ ಕುರಿತಾದೆ ಪುಸ್ತಕಗಳು

- **ಪನಿನೀಸಂಸಂ ಪ್ರಕಟಿಸಿದ ಘನ ತ್ಯಾಜ್ಯ ನಿರ್ವಹಣೆ ಮತ್ತು ನಿಭಾವಣೆ ನಿಯಮಗಳು–2016 ಕಿರು ಹೊತ್ತಿಗೆ**

ಪನಿನೀಸಂಸಂಯು ಘನ ತ್ಯಾಜ್ಯ ನಿರ್ವಹಣೆ ಮತ್ತು ನಿಯಮಗಳು–2016 ಇದರ ಕುರಿತ ಕಿರು ಹೊತ್ತಿಗೆಯನ್ನು ಪ್ರಕಟಿಸಿದೆ. ಘನ ತ್ಯಾಜ್ಯ ನಿರ್ವಹಣೆ ಕರಿತು ಅರಿವು ಮೂಡಿಸಲು ಈ ಪುಸ್ತಕಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮುಖ್ಯ ಕಛೇರಿ ಹಾಗು ಪ್ರಾದೇಶಿಕ ಕಛೇರಿಗಳು, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ, ಪೌರಾಡಳಿತ ನಿರ್ದೇಶನಾಲಯ, ನಗರಾಬಿವೃದ್ಧಿ ಇಲಾಖೆ ಹಾಗು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗಳಿಗೆ ಹಾಗು ರಾಜ್ಯದ ನಗರ ಸ್ಥಳಿಯ ಸಂಸ್ಥೆಗಳಿಗೆ ಕಳುಹಿಸಲಾಗಿದೆ.




ಘನ ತ್ಯಾಜ್ಯ ನಿರ್ವಹಣೆ ಮತ್ತು ನಿಯಮಗಳು–2016 ಕಿರು ಹೊತ್ತಿಗೆ

- **ಪನಿನೀಸಂಸಂಯಿಂದ ಪ್ರಕಟಿಸಲ್ಪಟ್ಟ ಕರಪತ್ರಗಳು**

ಪನಿನೀಸಂಸ್ಥೆಯು ನೀರಿನ ಬಗ್ಗೆ ಘೋಷ ವಾಕ್ಯವನ್ನೊಳಗೊಂಡ ವಿವಿಧ ಕರಪತ್ರಗಳನ್ನು ಪ್ರಕಟಿಸಿದೆ ಹಾಗು ಈ ಕರಪತ್ರಗಳನ್ನು ವಿದ್ಯಾರ್ಥಿಗಳಲ್ಲಿ ನೀರಿನ ಸಂರಕ್ಷಣೆಯ ಅರಿವು ಮೂಡಿಸುವ ಸಲುವಾಗಿ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಎಲ್ಲಾ ಇಕೋ–ಕ್ಲಬ್ ಶಾಲೆಗಳಿಗೆ ಕಳುಹಿಸಿಕೊಡಲಾಯಿತು.













**ರಾಷ್ಟ್ರೀಯ ಹಸಿರು ಪಡೆ ತಂಡವು ಭೇಟಿ ಮಾಡಿದ ಇಕೋ–ಕ್ಲಬ್ ಶಾಲೆಗಳು**

ರಾಜ್ಯ ಸಂಚಲನಾ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗಿದ ಸಂಚಲನಾ ಸಮಿತಿ ಸಭೆಯು ರಾಷ್ಟ್ರೀಯ ಹಸಿರು ಪಡೆ ತಂಡವು ಇಕೋ–ಕ್ಲಬ್ ಶಾಲೆಗಳಿಗೆ ಭೇಟಿ ನೀಡಲು ಅನುಮೋದಿಸಿತು. ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ಪ್ರಚಾರ ಮಾಡಲು ಹಾಗೂ ಇಕೋ–ಕ್ಲಬ್‌ಗಳ

ಚಟುವಟಿಕೆಗಳನ್ನು ಪರೀಶೀಲಿಸಲು ಮತ್ತು ರಾಜ್ಯ ಸಂಚಲನಾ ಸಮಿತಿಯಲ್ಲಿ ನಿಗದಿಪಡಿಸಿದಂತೆ ಪನಿನೀಸಂಸಂಯ ರಾಷ್ಟ್ರೀಯ ಹಸಿರು ಪಡೆ ತಂಡವು 40 ಇಕೋ–ಕ್ಲಬ್ ಶಾಲೆಗಳಿಗೆ ಭೇಟಿ ನೀಡಿತು. ಶಾಲೆಗಳಿಗೆ ಭೇಟಿ ಮಾಡಿದ ಅವಧಿಯಲ್ಲಿ ಇಕೋ–ಕ್ಲಬ್ ಚಟುವಟಿಕೆಗಳನ್ನು ಪರಿಶೀಲಿಸಲಾಯಿತು ಮತ್ತು ಶಾಲೆಯ ಮುಖ್ಯೋಪಾದ್ಯಯರೊಡನೆ ಹಾಗೂ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರೊಡನೆ ಚರ್ಚಿಸಲಾಯಿತು. ಇಕೋ–ಕ್ಲಬ್ ವರದಿ, ಬಳಕೆ ಪ್ರಮಾಣ ಪತ್ರ ಹಾಗೂ ಅಗತ್ಯವಾದ ಮಾಹಿತಿಯನ್ನು ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರಿಗೆ ವಿವರಿಸಲಾಯಿತು. ರಾಷ್ಟ್ರೀಯ ಹಸಿರು ಪಡೆ ತಂಡವು ಭೇಟಿ ನೀಡಿದ ಪ್ರತಿ ಶಾಲೆಯಲ್ಲಿ ಇಕೋ–ಕ್ಲಬ್ ಸದಸ್ಯರನ್ನು ಉದ್ದೇಶಿಸಿ ಮಾತಾನಾಡಿದರು ಮತ್ತು ಇಕೋ–ಕ್ಲಬ್ ಚಟುವಟಿಕೆಗಳನ್ನು ನಿರ್ವಹಿಸುವಾಗ ಶಿಕ್ಷಕರು ಎದುರಿಸುವಂತಹ ಸಮಸ್ಯೆಗಳನ್ನು ಗಮನಿಸಲಾಯಿತು ಮತ್ತು ಅನುಷ್ಠಾನಗೊಳಿಸಲು ಸುಲಭ ವಿಧಾನಗಳನ್ನು ತಿಳಸಿಕೊಡಲಾಯಿತು. ಶಾಲೆಗಳನ್ನು ಭೇಟಿ ನೀಡಿದ ವಿವರಗಳನ್ನು ಅನುಬಂಧದಲ್ಲಿ ನೋಡಬಹುದಾಗಿದೆ.



*ಸರ್ಕಾರಿ ಪ್ರೌಢ ಶಾಲೆ ವಡಗಾವಿ, ಬೆಳಗಾವಿ ಜಿಲ್ಲೆ*



*ಸರ್ಕಾರಿ ಪ್ರೌಢ ಶಾಲೆ ದೇಶಹಳ್ಳಿ ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ*



*ಸರ್ಕಾರಿ ಪ್ರೌಢ ಶಾಲೆ ಉತ್ತರಹಳ್ಳಿ ಬೆಂಗಳೂರು ದಕ್ಷಿಣ ವಲಯ*



*ಸರ್ಕಾರಿ ಪ್ರೌಢ ಶಾಲೆ ಅರಕೇಶ್ವರ ನಗರ ಮಂಡ್ಯ ಜಿಲ್ಲೆ*

**ಉಪಗ್ರಹ ಆಧಾರಿತ ತರಬೇತಿ – ಇಕೋ–ಕ್ಲಬ್ ಶಾಲಾ ಉಸ್ತುವಾರಿ ಶಿಕ್ಷಕರಿಗಾಗಿ**

ಪನಿನೀಸಂಸಂಯು ದಿನಾಂಕ 16 ಮಾರ್ಚ್ 2019 ರಂದು ಉಪಗ್ರಹ **ಆಧಾರಿತ** (SATCOM) ತರಬೇತಿಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (DSERT) ಯಲ್ಲಿ ಇಕೋ–ಕ್ಲಬ್ ಶಾಲಾ ಉಸ್ತುವಾರಿ ಶಿಕ್ಷಕರಿಗಾಗಿ ಆಯೋಜಿಸಲಾಗಿತ್ತು. ಇದರಲ್ಲಿ 34 ಶೈಕ್ಷಣಿಕ ಜಿಲ್ಲೆಗಳಿಂದ ಒಟ್ಟು 1828 ಇಕೋ–ಕ್ಲಬ್ ಶಿಕ್ಷಕರು ಭಾಗವಹಿಸಿದ್ದರು. ಎಂಪ್ರಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಮಹೇಶ ಬಿ ಶಿರೂರ್, ಭಾ.ಅ.ಸೇ ರವರು ಇಕೋ–ಕ್ಲಬ್ ಶಿಕ್ಷಕರಿಗೆ ರಾಷ್ಟ್ರೀಯ ಹಸಿರು ಪಡೆ ಯ ಕರಿತು ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಇಕೋ–

ಕ್ಲಬ್‌ಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಹಾಗು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಮತ್ತು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಸಂಯೋಜಕರು ಮಾಹಿತಿ ನೀಡಿದರು. ಇಕೋ–ಕ್ಲಬ್ ಶಾಲೆಗಳು ಹಮ್ಮಿಕೊಳ್ಳಬಹುದಾದ ಪರಿಸರ ಚಟುವಟಿಕೆಗಳು ಹಾಗು ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು. ವಾರ್ಷಿಕ ವರದಿ,ಬಳಕೆ ಪ್ರಮಾಣದ ಮಾದರಿ ಪತ್ರದ ಬಗ್ಗೆ ಶಿಕ್ಷಕರಿಗೆ ಮಾಹಿತಿಯನ್ನು ನೀಡಲಾಯಿತು. ಇಕೋ–ಕ್ಲಬ್‌ಗೆ ಸಂಬಂಧಿಸಿದಂತೆ, ಅನುದಾನದ ಬಳಕೆ ಹಾಗು ವಾರ್ಷಿಕ ವರದಿಯ ಕುರಿತಾದ ವಿವಿದ ಪ್ರಶ್ನೆಗಳಿಗೆ ಪ್ರಶ್ನೋತ್ತರದ ಅಧಿವೇಶನದಲ್ಲಿ ಉತ್ತರಿಸಲಾಯಿತು. ಶಿಭಿರಾರ್ಥಿಗಳ ಪ್ರತಿಕ್ರಿಯೆಗಳನ್ನು ಸ್ವೀಕರಿಸಲಾಯಿತು.





**ಇಕೋ–ಕ್ಲಬ್ ಶಾಲೆಗಳಿಗೆ ಜಿಲ್ಲಾವಾರು ಅನುದಾನ ಬಿಡುಗಡೆ**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಡ ಶಾಲೆಗಳ ಸಂಖ್ಯೆ | ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಡ ಶಾಲೆಗಳ ಸಂಖ್ಯೆ | ಒಟ್ಟು ಶಾಲೆಗಳ ಸಂಖ್ಯೆ | ಇಕೋ–ಕ್ಲಬ್ ಶಾಲೆಗಳಿಗೆ ಬಿಡುಗಡೆ ಮಾಡಿದ ಮೊತ್ತ (ರೂ) |
|---|---|---|---|---|---|
| ೧ | ಬಾಗಲಕೋಟೆ | ೧೮೩ | ೪೭ | ೨೩೦ | ೧೧,೫೦,೦೦೦/- |
| ೨ | ಬೆಂಗಳೂರು ಉತ್ತರ | ೧೨೯ | ೪೬ | ೧೭೫ | ೮,೭೫,೦೦೦/- |
| ೩ | ಬೆಂಗಳೂರು ದಕ್ಷಿಣ | ೧೧೭ | ೪೭ | ೧೬೪ | ೮,೨೦,೦೦೦/- |
| ೪ | ಬೆಂಗಳೂರು ಗ್ರಾಮಂತರ | ೨೧೩ | ೩೬ | ೨೪೯ | ೧೨,೪೫,೦೦೦/- |
| ೫ | ಬೆಳಗಾವಿ | ೧೨೭ | ೪೮ | ೧೭೫ | ೮,೭೫,೦೦೦/- |
| ೬ | ಬಳ್ಳಾರಿ | ೧೬೮ | ೪೭ | ೨೧೫ | ೧೦,೭೫,೦೦೦/- |
| ೭ | ಬೀದರ್ | ೧೬೦ | ೪೭ | ೨೦೭ | ೧೦,೩೫,೦೦೦/- |
| ೮ | ಬಿಜಾಪುರ | ೧೩೨ | ೪೧ | ೧೭೩ | ೮,೬೫,೦೦೦/- |
| ೯ | ಚಾಮರಾಜನಗರ | ೧೯೯ | ೪೮ | ೨೪೭ | ೧೨,೩೫,೦೦೦/- |
| ೧೦ | ಚಿಕ್ಕಬಳ್ಳಾಪುರ | ೨೧೮ | ೩೧ | ೨೪೯ | ೧೨,೪೫,೦೦೦/- |
| ೧೧ | ಚಿಕ್ಕಮಗಳೂರು | ೧೪೨ | ೪೮ | ೧೯೦ | ೯,೫೦,೦೦೦/- |
| ೧೨ | ಚಿಕ್ಕೋಡಿ | ೧೫೯ | ೪೮ | ೨೦೭ | ೧೦,೩೫,೦೦೦/- |
| ೧೩ | ಚಿತ್ರದುರ್ಗಾ | ೧೧೦ | ೪೮ | ೧೫೮ | ೭,೯೦,೦೦೦/- |
| ೧೪ | ದಕ್ಷಿಣ ಕನ್ನಡ | ೧೬೯ | ೫೩ | ೨೨೨ | ೧೧,೧೦,೦೦೦/- |
| ೧೫ | ದಾವಣಗೆರೆ | ೧೫೨ | ೪೭ | ೧೯೯ | ೯,೯೫,೦೦೦/- |
| ೧೬ | ಧಾರವಾಢ | ೧೧೯ | ೪೫ | ೧೬೪ | ೮,೨೦,೦೦೦/- |
| ೧೭ | ಗದಗ | ೧೬೨ | ೪೮ | ೨೧೦ | ೧೦,೫೦,೦೦೦/- |
| ೧೮ | ಗುಲಬರ್ಗಾ | ೨೫೦ | – | ೨೫೦ | ೧೨,೫೦,೦೦೦/- |
| ೧೯ | ಹಾಸನ | ೨೪೦ | ೧೦ | ೨೫೦ | ೧೨,೫೦,೦೦೦/- |

| | | | | | |
|---|---|---|---|---|---|
| ೨೦ | ಹಾವೇರಿ | ೧೩೭ | ೪೮ | ೧೮೫ | ೯,೨೫,೦೦೦/- |
| ೨೧ | ಕೊಡಗು | ೨೦೨ | ೪೮ | ೨೫೦ | ೧೨,೫೦,೦೦೦/- |
| ೨೨ | ಕೋಲಾರ | ೨೧೧ | ೩೯ | ೨೫೦ | ೧೨,೫೦,೦೦೦/- |
| ೨೩ | ಕೊಪ್ಪಳ | ೨೨೨ | ೨೭ | ೨೪೯ | ೧೨,೪೫,೦೦೦/- |
| ೨೪ | ಮಧುಗಿರಿ | ೧೫೨ | ೪೭ | ೧೯೯ | ೯,೯೫,೦೦೦/- |
| ೨೫ | ಮಂಡ್ಯ | ೨೧೪ | ೩೬ | ೨೫೦ | ೧೨,೫೦,೦೦೦/- |
| ೨೬ | ಮೈಸೂರು | ೨೧೬ | ೩೨ | ೨೪೮ | ೧೨,೪೦,೦೦೦/- |
| ೨೭ | ರಾಯಚೂರು | ೨೨೦ | ೨೮ | ೨೪೮ | ೧೨,೪೦,೦೦೦/- |
| ೨೮ | ರಾಮನಗರ | ೧೯೩ | ೪೬ | ೨೩೯ | ೧೧,೯೫,೦೦೦/- |
| ೨೯ | ಶಿವಮೊಗ್ಗ | ೧೬೪ | ೪೭ | ೨೧೧ | ೧೦,೫೫,೦೦೦/- |
| ೩೦ | ಶಿರಸಿ | ೧೯೬ | ೪೮ | ೨೪೪ | ೧೨,೨೦,೦೦೦/- |
| ೩೧ | ತುಮಕೂರು | ೧೩೩ | ೫೦ | ೧೮೩ | ೯,೧೫,೦೦೦/- |
| ೩೨ | ಉಡುಪಿ | ೧೭೯ | ೭೦ | ೨೪೯ | ೧೨,೪೫,೦೦೦/- |
| ೩೩ | ಉತ್ತರ ಕನ್ನಡ | ೧೬೩ | ೪೮ | ೨೧೧ | ೧೦,೫೫,೦೦೦/- |
| ೩೪ | ಯಾಧಗಿರಿ | ೨೪೩ | ೫ | ೨೪೮ | ೧೨,೪೦,೦೦೦/- |
| **ಒಟ್ಟು** | | **೫೯೯೪** | **೧೪೦೪** | **೭೩೯೮** | **೩,೬೯,೯೦,೦೦೦/-** |

## 2018-19 ನೇ ಅವಧಿಯಲ್ಲಿ ರಾಷ್ಟ್ರೀಯ ಹಸಿರು ಪಡೆ ತಂಡವು ಭೇಟಿ ಮಾಡಿದ ಇಕೋ-ಕ್ಲಬ್ ಶಾಲೆಗಳ ವಿವರಗಳು

| ಕ್ರಮ ಸಂಖ್ಯೆ | ಕಂದಾಯ ವಿಭಾಗ | ಜಿಲ್ಲೆ | ಬ್ಲಾಕ್/ತಾಲ್ಲೂಕು | ಶಾಲೆಯ ಹೆಸರು |
|---|---|---|---|---|
| ೧ | ಬೆಳಗಾವಿ | ಹಾವೇರಿ | ಹಾವೇರಿ | ಸರ್ಕಾರಿ ಪ್ರೌಢ ಶಾಲೆ ಕಲ್ಲಿಹಾಳ |
| ೨ | | | | ಸರ್ಕಾರಿ ಪ್ರೌಢ ಶಾಲೆ ಕಬ್ಬೂರು |
| ೩ | | | | ಸರ್ಕಾರಿ ಪ್ರೌಢ ಶಾಲೆ ಕಾಟೇನಹಳ್ಳಿ |
| ೪ | | | | ಎಸ್ಎನ್‌ಬಿಕೆ ಪ್ರೌಢ ಶಾಲೆ ದೇವಿಹೊಸೂರು |
| ೫. | | ಬೆಳಗಾವಿ | ಸವದತ್ತಿ | ಸರ್ಕಾರಿ ಪದವಿ ಪೂರ್ವ ಕಾಲೇಜು ಯಕ್ಕುಂಡಿ |
| ೬ | | | | ಸರ್ಕಾರಿ ಪ್ರೌಢ ಶಾಲೆ ಮರಕುಂಬಿ |
| ೭ | | | | ಸರ್ಕಾರಿ ಪ್ರೌಢ ಶಾಲೆ ಮಲ್ಲೂರು, ಸವದತ್ತಿ |
| ೮ | | | ಬೆಳಗಾವಿ | ಸರ್ಕಾರಿ ಪ್ರೌಢ ಶಾಲೆ ವಡಗಾವಿ |
| ೯ | | | | ಸರ್ಕಾರಿ ಪ್ರೌಢ ಶಾಲೆ ರಾಮತೀರ್ಥನಗರ |
| ೧೦ | | | | ಸರ್ಕಾರಿ ಪ್ರೌಢ ಶಾಲೆ ವಂಟಮುರಿ |
| ೧೧ | ಕಲಬುರಗಿ | ಬಳ್ಳಾರಿ | ಕುಡ್ಲಗಿ | ಶ್ರೀ ಬಿ.ಕೆ.ವಿ. ಸರ್ಕಾರಿ ಪ್ರೌಢ ಶಾಲೆ,ನಿಂಬಲಗೆರೆ |
| ೧೨ | | | | ಸರ್ಕಾರಿ ಬಾಲಕರ ಪ್ರೌಢ ಶಾಲೆ, ಚಿಕ್ಕಜೋಗಿಹಳ್ಳಿ |
| ೧೩ | | | | ಸರ್ಕಾರಿ ಪ್ರೌಢ ಶಾಲೆ, ಗುಡಿಕೋಟೆ |

| | | | | |
|---|---|---|---|---|
| ೧೪ | | | ಹೊಸಪೇಟೆ | ಸರ್ಕಾರಿ ಪ್ರೌಢ ಶಾಲೆ (ರಾಮಶಿಅ) ದಾನಪುರ |
| ೧೫ | | | | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಪ್ರೌಢ ಶಾಲೆ ವಿಭಾಗ |
| ೧೬ | | | | ಸರ್ಕಾರಿ ಪ್ರೌಢ ಶಾಲೆ, ಕಾಕುಬಲು |
| ೧೭. | | ಕಲಬುರಗಿ | ಜೇವರ್ಗಿ | ಸರ್ಕಾರಿ ಪ್ರೌಢ ಶಾಲೆ, ಬಿರಾಲ |
| ೧೮ | | | ಕಲಬುರಗಿ (ದಕ್ಷಿಣ ವಲಯ) | ಸರ್ಕಾರಿ ಪ್ರೌಢ ಶಾಲೆ, ಕನಡಾಲ |
| ೧೯ | | | | ಸರ್ಕಾರಿ ಪ್ರೌಢ ಶಾಲೆ, ನಂದೂರು |
| ೨೦ | | | | ಆದರ್ಶ ವಿದ್ಯಾಲಯ (ರಾಮಶಿಅ) ಬೀಮಳ್ಳಿ |
| ೨೧ | ಮೈಸೂರು | ಮಂಡ್ಯ | ಮದ್ದೂರು | ಸರ್ಕಾರಿ ಪ್ರೌಢ ಶಾಲೆ ಕೂಲಗೆರೆಗಾಟೆ |
| ೨೨ | | | | ಸರ್ಕಾರಿ ಪ್ರೌಢ ಶಾಲೆ, ಶಿವಪುರ |
| ೨೩ | | | | ಸರ್ಕಾರಿ ಪ್ರೌಢ ಶಾಲೆ, ದೇಶಳ್ಳಿ |
| ೨೪ | | | ಮಂಡ್ಯ | ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಅರಕೇಶ್ವರ |
| ೨೫ | | | | ಸರ್ಕಾರಿ ಪ್ರೌಢ ಶಾಲೆ, ಶಂಕರಪುರ |
| ೨೬ | | | | ಸರ್ಕಾರಿ ಪ್ರೌಢ ಶಾಲೆ, ಸಾಥನೂರು |
| ೨೭ | | ಹಾಸನ | ಚೆನ್ನರಾಯಪಟ್ಟಣ | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಶ್ರವಣಬೆಳಗೋಳ |
| ೨೮ | | | | ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಶ್ರವಣಬೆಳಗೋಳ |
| ೨೯ | | | | ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಹಿರಿಸಾವೆ |
| ೩೦ | | | | ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗ, ಹಿರಿಸಾವೆ |
| ೩೧ | ಬೆಂಗಳೂರು | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲ ವಿಭಾಗ, ವಿಶ್ವನಾಥಪುರ |
| ೩೨ | | | | ಸರ್ಕಾರಿ ಪ್ರೌಢ ಶಾಲೆ, ಕುಂಡಣ |
| ೩೩ | | | ದೊಡ್ಡಬಳ್ಳಾಪುರ | ಸರ್ಕಾರಿ ಪ್ರೌಢ ಶಾಲೆ, ಮೇಲುಕೋಟೆ |
| ೩೪ | | | | ಸರ್ಕಾರಿ ಪ್ರೌಢ ಶಾಲೆ, ಬಾಶೆಟ್ಟಿಹಳ್ಳಿ |
| ೩೫ | | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | ಸರ್ಕಾರಿ ಪ್ರೌಢ ಶಾಲೆ, ಉತ್ತರಹಳ್ಳಿ |
| ೩೬ | | | | ಸರ್ಕಾರಿ ಪ್ರೌಢ ಶಾಲೆ, ಕಗ್ಗಲಿಪುರ |
| ೩೭ | | | | ಸರ್ಕಾರಿ ಪ್ರೌಢ ಶಾಲೆ, ಪುಟ್ಟೇನಹಳ್ಳಿ |
| ೩೮ | | | ಬೆಂಗಳೂರು ಉತ್ತರ | ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪೀಣ್ಯ |
| ೩೯ | | | | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕಬಿದರಕಲ್ಲು |

| | | | | |
|---|---|---|---|---|
| ೪೦ | | | | ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ನಾಗಸಂದ್ರ |